**ದಿ.17.11.2025 ರಂದುಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**
**ಮುಂದುವರೆದ ಸತ್ಯಪ್ರಮಾಣ ಹೇಳಿಕೆಃ ಶ್ರೀ.ಆರ್ ಎಸ್ಐ, ದೂರುದಾರರ ಪರ ವಕೀಲರಿಂದ**

ದಿ.08.02.2017 ರಂದು ರೂ.6,03,000/- ತೆರಿಗೆಯ ಜೊತೆಗೆ ಬಿಲ್ಲನ್ನು ನಾನು ಆರೋಪಿಯ ಕಂಪನಿಯವರಿಗೆ ನೀಡಿರುತ್ತೇನೆ. ದಿ.30.03.2017 ರಂದು ರೂ.6,23,000/- ತೆರಿಗೆಯ ಜೊತೆಗೆ ಬಿಲ್ಲನ್ನು ನಾನು ಆರೋಪಿಯ ಕಂಪನಿಯವರಿಗೆ ನೀಡಿರುತ್ತೇನೆ. ಒಟ್ಟು ರೂ.16ಲಕ್ಷ ಹಣವನ್ನು ಆರೋಪಿಯ ಕಂಪನಿಯವರು ನನಗೆ ಕೊಡಬೇಕಾಗಿತ್ತು. ಸದರಿ ಹಣವನ್ನು ನಾನು ಕೇಳಲು ಸುಮಾರು 20 ಬಾರಿ ಆರೋಪಿಯ ಕಂಪನಿಯವರನ್ನು ಭೇಟಿ ಮಾಡಿರುತ್ತೇನೆ. ಆದರೆ ಆರೋಪಿಯ ಕಂಪನಿಯವರು ನನಗೆ ಯಾವುದೇ ಬಾಕಿ ಮೊತ್ತವನ್ನು ನೀಡಿರುವುದಿಲ್ಲ. ಈ ಸಂಬಂದ ನಾನು ಆರೋಪಿಯ ಕಂಪನಿಯವರಿಗೆ

ಇಮೇಲ್ ಸಂದೇಶವನ್ನು ನೀಡಿರುತ್ತೇನೆ. ಜುಲೈ 2019ಕ್ಕೆ ನನ್ನನ್ನು ಆರೋಪಿಯ ಕಂಪನಿಯವರು ಬಿಲ್ಲಿನ ಸಂಬಂಧ ರಾಜೀ ಮಾಡಿಕೊಳ್ಳೋಣಾ ಎಂದು ಕರೆದಿರುತ್ತಾರೆ. ಆದರೆ ಆರೋಪಿಯ ಕಂಪನಿಯವರು ನನಗೆ ಕೊಡಬೇಕಾಗಿದ್ದ ಬಾಕಿ ಹಣವನ್ನು ಕೊಡದೇ ವಾಪಸ್ ಕಳುಹಿಸಿರುತ್ತಾರೆ. 2023 ಜುಲೈ ತಿಂಗಳಿನಲ್ಲಿ ಆರೋಪಿಯ ಕಂಪನಿಯವರು ನನಗೆ ಬೆದರಿಕೆ ಹಾಕಿ ನೀನು ನನ್ನನ್ನು ಏನು ಮಾಡಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ನಾನು ಆರೋಪಿಯ ಕಂಪನಿಯವರಿಗೆ ದಿ.08.11.2023 ರಂದು ನನ್ನ ವಕೀಲರ ಮೂಲಕ ಲೀಗಲ್ ನೋಟಿಸ್ ಕಳುಹಿಸಿರುತ್ತೇನೆ . ಸದರಿ ಲೀಗಲ್ ನೋಟಿಸ್ ಗೆ ಆರೋಪಿಯ ಕಂಪನಿಯವರು ದಿ.25.10.2024 ರಂದು ರಿಪ್ಲೈ ನೋಟಿಸ್ ನ್ನು ನೀಡಿರುತ್ತಾರೆ. ನಂತರ ನಾನು ದಿ.21.03.2025 ರಂದು ವಿಧಾನ ಸೌಧ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಎರಡು ದಿನಗಳ ನಂತರ ನಾನು ಡಿಸಿಪಿ ಕಛೇರಿಗೂ ಸಹ ದೂರು ನೀಡಿರುತ್ತೇನೆ. ಆದರೆ ನನ್ನ ದೂರಿಗೆ ಸಂಬಂದಪಟ್ಟಂತೆ ಪೊಲೀಸರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಆದ್ದರಿಂದ ನಾನು ಈ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿರುತ್ತೇನೆ.

**ಮುಂದುವರೆದ ಸತ್ಯ ಪ್ರಮಾಣ ಹೇಳಿಕೆಗೆ ಸಮಯಕೋರಿರುತ್ತಾರೆ. ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

**CW-1 is present and further examined.**

Advocate for complainant prays time for further sworn statement. Hence, time granted.

For Further Sworn statement. Call on 08.12.2025.

III Addl.C.M.M, Bengaluru.